**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 289 (329) |
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 29.01.2026 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಅಧಿವೇಶನದಲ್ಲಿ ಪ್ರಶ್ನೆ ಸಂಖ್ಯೆ 1408ರಲ್ಲಿ ಡಿಸೆಂಬರ್ 29, 2024ರಂದು ನಡೆದ ಕೆಎಎಸ್ ಪೂರ್ವಭಾವಿ ಪ್ರಶ್ನೆಪತ್ರಿಕೆಯಲ್ಲಿ ಸಾಕಷ್ಟು ಲೋಪ ದೋಷಗಳಾಗಿದ್ದರಿಂದ ಈ ಕುರಿತು ಕೇಳಿರುವ ಪ್ರಶ್ನೆಗೆ ಇಲಾಖೆಯ ಅಧಿಕಾರಿಗಳು ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿರುವುದಿಲ್ಲವೆಂದು ಉತ್ತರ ನೀಡುವ ಮೂಲಕ ಸದನಕ್ಕೆ ತಪ್ಪು ಮಾಹಿತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತಪ್ಪು ಮಾಹಿತಿ ನೀಡಿರುವ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು; | ತಪ್ಪು ಮಾಹಿತಿ ನೀಡಿರುವುದಿಲ್ಲ. |
| ಆ | 2024ರ ಆಗಸ್ಟ 27ರಂದು ನಡೆದ ಕೆಎಎಸ್ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಒಟ್ಟು ಎಷ್ಟು ಪ್ರಶ್ನೆಗಳು ಭಾಷಾಂತರ ಲೋಪದೋಷದಿಂದ ಕೂಡಿದ್ದವು; ಯಾವ ಯಾವ ಪ್ರಶ್ನೆಗಳಿಗೆ ಗ್ರೇಸ್ ಅಂಕಗಳನ್ನು ನೀಡಲಾಗಿದೆ; (ವಿವರ ನೀಡುವುದು) | 2024ರ ಆಗಸ್ಟ 27ರಂದು ನಡೆದ ಕೆಎಎಸ್ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿ ಕನ್ನಡ ಭಾಷಾಂತರದ ಲೋಪದೋಷಗಳ ಕುರಿತು ಪರಿಶೀಲಿಸಲು, ಸರಾಸರಿ 15 ವರ್ಷಗಳಿಗೂ ಅಧಿಕ ಸೇವಾನುಭವವನ್ನು ಹೊಂದಿರುವ ಹಾಗೂ ಉತ್ತಮ ಕನ್ನಡ ಭಾಷಾ ಜ್ಞಾನವನ್ನು ಹೊಂದಿರುವ ಹಾಗೂ ಆಯಾ ವಿಷಯಗಳಲ್ಲಿ ಪರಿಣತಿ ಹೊಂದಿರುವಂತಹ ವಿವಿಧ ವಿಷಯಗಳ ಮೂವರು ವಿಷಯ ತಜ್ಞರುಗಳನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಪ್ರಶ್ನೆಗಳ ಭಾಷಾಂತರವನ್ನು ಪರಿಶೀಲಿಸಿ, ಪತ್ರಿಕೆ-1ರಲ್ಲಿ 05 ಪ್ರಶ್ನೆಗಳಿಗೆ ಹಾಗೂ ಪತ್ರಿಕೆ-2ರಲ್ಲಿ 05 ಪ್ರಶ್ನೆಗಳಿಗೆ ಮಾತ್ರ ಕೀ-ಉತ್ತರಗಳು ಪರಿಷ್ಕೃತಗೊಳ್ಳಬೇಕಿರುತ್ತದೆ ಎಂದು ಅಭಿಪ್ರಾಯ ನೀಡಿದ್ದರಿಂದ ಪೂರ್ವಭಾವಿ ಮರು ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ಇದರಿಂದಾಗಿ ದಿನಾಂಕ: 27.8.2024ರಂದು ನಡೆದ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಗಳಿಗೆ ಗ್ರೇಸ್ ಅಂಕಗಳನ್ನು ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ | 2024ರ ಡಿಸೆಂಬರ್ 29ರಂದು ನಡೆದ ಕೆಎಎಸ್ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಒಟ್ಟು ಎಷ್ಟು ಪ್ರಶ್ನೆಗಳು ಭಾಷಾಂತರ ಲೋಪದೋಷದಿಂದ ಕೂಡಿದ್ದವು ಯಾವ ಯಾವ ಪ್ರಶ್ನೆಗಳಿಗೆ ಗ್ರೇಸ್ ಅಂಕಗಳನ್ನು ನೀಡಲಾಗಿದೆ? (ವಿವರ ನೀಡುವುದು) | 2024ರ ಡಿಸೆಂಬರ್ 29ರಂದು ನಡೆದ ಕೆ.ಎ.ಎಸ್ ಪೂರ್ವಭಾವಿ ಮರುಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿ ಉಂಟಾದ ಭಾಷಾಂತರ ಲೋಪದೋಷಗಳ ಕುರಿತು ಪರಿಶೀಲಿಸಲು ರಚಿಸಲಾಗಿದ್ದ ಮೂವರು ವಿಷಯ ತಜ್ಞರುಗಳನ್ನೊಳಗೊಂಡ ಒಟ್ಟು 12 ವಿಷಯಗಳ ವಿಷಯ ತಜ್ಞರುಗಳ ಸಮಿತಿಯು ಭಾಷಾಂತರ ಹಾಗೂ ತಾಂತ್ರಿಕ ದೋಷದಿಂದಾಗಿ 1 ಪ್ರಶ್ನೆಯ ಕೀ-ಉತ್ತರವನ್ನು ಪರಿಷ್ಕರಿಸಬೇಕೆಂದು ಹಾಗೂ 5 ಪ್ರಶ್ನೆಗಳಿಗೆ ಕೃಪಾಂಕ ನೀಡಬೇಕೆಂದು ಅಭಿಪ್ರಾಯ ನೀಡಲಾಗಿದ್ದು, ಅದರಂತೆ ಕ್ರಮವಹಿಸಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ:- |

**ಪತ್ರಿಕೆ - 1**

| ಕ್ರ. ಸಂ. | ಪ್ರಶ್ನೆ ಸಂಖ್ಯೆ | ಪ್ರಕಟಿಸಲಾದ ಕೀ ಉತ್ತರ | ಪರಿಷ್ಕೃತ ಕೀ ಉತ್ತರ | ಸಮಿತಿಯ ಅಭಿಪ್ರಾಯ |
|---|---|---|---|---|
| 1 | 21 | 1 | ಕೃಪಾಂಕ | ಭಾಷಾಂತರ ಲೋಪದಿಂದಾಗಿ |
| 2 | 50 | 2 | 2 ಅಥವಾ 3 ಅಥವಾ 4 | ಭಾಷಾಂತರ ಲೋಪದಿಂದಾಗಿ |
| 3 | 66 | 2 | ಕೃಪಾಂಕ | ತಾಂತ್ರಿಕ ದೋಷದಿಂದಾಗಿ |
| 4 | 94 | 2 | ಕೃಪಾಂಕ | ಭಾಷಾಂತರ ಲೋಪದಿಂದಾಗಿ |

**ಪತ್ರಿಕೆ - 2**

| ಕ್ರ. ಸಂ. | ಪ್ರಶ್ನೆ ಸಂಖ್ಯೆ | ಪ್ರಕಟಿಸಲಾದ ಕೀ ಉತ್ತರ | ಪರಿಷ್ಕೃತ ಕೀ ಉತ್ತರ | ಸಮಿತಿಯ ಅಭಿಪ್ರಾಯ |
|---|---|---|---|---|
| 1 | 60 | 2 | ಕೃಪಾಂಕ | ತಾಂತ್ರಿಕ ದೋಷದಿಂದಾಗಿ |
| 2 | 97 | 1 | ಕೃಪಾಂಕ | ತಾಂತ್ರಿಕ ದೋಷದಿಂದಾಗಿ |

**ಸಂಖ್ಯೆ:ಸಿಆಸುಇ 10 ಎಸ್‌ಎಸ್‌ಸಿ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ